<u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.1132/2010
ಸಿಡಬ್ಲ್ಯೂ. 6 ಪಿಡಬ್ಲ್ಯೂ4

ಸಾಕ್ಷಿಯ ಹೆಸರು - ಕುಬೇರಪ್ಪ ಭೂತಿ

ವಯಸ್ಸು - 78 ವರ್ಷ

ಉದ್ಯೋಗ - ನಿವೃತ್ತ ಸರ್ಕಾರಿ ನೌಕರ

ವಾಸ - ಬನಗಾರ ಗಲ್ಲಿ ತಾ ಗೋಕಾಕ

<u>ದಿನಾಂಕಃ 14-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

ಸುಮಾರು 12 ವರ್ಷಗಳ ಹಿಂದೆ ನಾನು , ನನ್ನ ಮೊಮ್ಮಗ ಹಾಗೂ ನನ್ನ ಹೆಂಡತಿಯೊಂದಿಗೆ ಗೋಕಾಕದಿಂದ ಹುಬ್ಬಳ್ಳಿಯಿಂದ ಕೆಎಸ್ ಆರ ಟಿಸಿ ಬಸ್ಸನಲ್ಲಿ ಹೊರಟಿದ್ದೇವು. ನಾನು ನಿದ್ದೆಯಲ್ಲಿದ್ದಾಗ ಸ್ವಪ್ಪಳವಾಗಿ ಎಚ್ಚರವಾದಾಗ ಬಸ ಅಪಘಾತವಾಗಿತ್ತು , ನನಗೆ ಹಾಗೂ ನನ್ನ ಹೆಂಡತಿಯ ಮೊಣಕಾಲಿಗಳಿಗೆ ಪೆಟ್ಟಾಗಿದ್ದು , ಚಾಸಾ8 ಇವನಿಗೆ ಮುಖಕ್ಕೆ ಸಾದಾ ಸ್ವರೂಪದ ಗಾಯವಾಗಿತ್ತು . ಸದರಿ ಬಸ ನಂಬರ ಹಾಗೂ ಬಸ್ಸ ಚಾಲಕನ ಹೆಸರು ಹಾಗೂ ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ಅಪಘಾತವು ಯಾವ ಸ್ಥಳದಲ್ಲಿ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಬಸನಲ್ಲಿದ್ದ ಇತರ ಪ್ರಯಾಣಿಕರಿಗೂ ಸಹ ಪೆಟ್ಟಾಗಿರುತ್ತದೆ ನಂತರ ನಮ್ಮನ್ನೆಲ್ಲಾ 108 ಅಂಬುಲೆನ್ಸ ಗಾಡಿಯಲ್ಲಿ ಉಪಚಾರಕ್ಕಾಗಿ ಗೋಕಾಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು ಇರುತ್ತದೆ. ಈ ವಿಷಯವಾಗಿ ಪೊಲೀಸರಿಗೆ ಚಾಸಾ-1 ರವರು ಪಿರ್ಯಾದಿ ನೀಡಿದ್ದು ಇರುತ್ತದೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>

ನಾವು ಪ್ರಯಾಣಿಸುತ್ತಿದ್ದ ಬಸ್ ಕೆಎ-27 ಎಫ್ 382 ಮಮದಾಪುರ ಕ್ರಾಸ ದಾಟಿದ ನಂತರ ಬಸ ಚಾಲಕ ಪ್ರಕಾಶ ಈರಣಗೌಡ ಪಾಟೀಲ ಬಸನ್ನು ಅತೀವೇಗವಾಗಿ ನಿಷ್ಕಾಳಜೀತನಿಂದ ನಡೆಸಿಕೊಂಡು ಹೋದವನೆ ನಂದಿಕಟ್ಟಿ ಬಸಸ್ಟಾಪ ದಾಟಿ ಕುಬಸದ ಇವರ ಹೊಲದ ಹತ್ತಿರ ರಸ್ತೆಕಡೆಗೆ ಗಮನ ಕೊಡದೆ ಬಸನ್ನು ಯರಗಟ್ಟಿ ಕಡೆಯಿಂದ ಗೋಕಾಕ ಕಡೆಗೆ ಬರುತ್ತಿದ್ದ ಕೆಎಸಆರಟಿಸಿ ಬಸಗೆ ಡಿಕ್ಕಿ ಹೊಡೆಸಿ

ಅಪಘಾತ ಮಾಡಿದನು. ಆಗ ಸಮಯ ಮುಂಜಾನೆ 7 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಹಾಗೆ ದಿಃ13-4-2010 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-3 ಹಾಗೂ ಸಂಬಂಧಪಟ್ಟ ಭಾಗವನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3(ಎ) ಪ್ರಕಾರ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.